## ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.

ಎಸ್.ಸಿ. ಸಂಖ್ಯೆಃ 2-13 ನ್ಯಾಯಾಲಯದ
ಸಾಕ್ಷಿ ಃ 1
ಪಿಡಬ್ಲ್ಯೂಃ3

ಸಾಕ್ಷಿದಾರರ ಹೆಸರು ಃ ಶೇಖರ
ತಂದೆ ಹೆಸರು ಃ ದಿ. ಮೆಣ್ಪ
ವಯಸ್ಸು ಃ 50
ವೃತ್ತಿ ಃ ಮುಖ್ಯ ಪೇದೆ 1723 ಹಿರಿಯಡ್ಕ ಠಾಣೆ
ವಾಸ ಃ ಹಿರಿಯಡ್ಕ

ದಿನಾಂಕಃ29-01-2015 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದ

ನಾನು ದಿನಾಂಕಃ 25-10-2006 ರಿಂದ 02-09-2013ರ ವರೆಗೆ ಶಂಕರನಾರಾಯಣ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕೆಲಸ ಮಾಡುತ್ತಿದ್ದೆ.

ಸದ್ರಿ ಪ್ರಕರಣಕ್ಕೆ ಸಂಬಂಧಿಸಿದಂತೆ ತಲೆ ಮರೆಸಿಕೊಂಡ 4ನೇ ಆರೋಪಿ ಫಾರುಕ್ ಈತನ ಬಗ್ಗೆ ನೀಡಿದ ಉದ್ಘೋಷಣಾ ಪತ್ರವನ್ನು ನ್ಯಾಯಾಲಯದಿಂದ ಪಡೆದುಕೊಂಡು ಉದ್ಘೋಷಿತ ಆರೋಪಿ ಕೊನೆಯದಾಗಿ ವಾಸ ಮಾಡಿದರೂ ಎನ್ನಲಾದ ಹಾರಾಡಿ ಗ್ರಾಮಕ್ಕೆ ಹೋಗಿ ಆತನ ವಾಸ್ತವ್ಯದ ಬಗ್ಗೆ ವಿಚಾರಿಸಿ ಆತ ತಲೆಮರಸಿಕೊಂಡಿದ್ದಾನೆಂದು ಖಚಿತಪಡಿಸಿಕೊಂಡು ನ್ಯಾಯಾಲಯ ನೀಡಿದ ಒಂದು ಉದ್ಘೋಷಣಾ ಪತ್ರದ ಪ್ರತಿಯನ್ನು ಅವರ ವಾಸದ ಮನೆಯ ಬಾಗಿಲಿಗೆ ಅಂಟಿಸಿ ಮತ್ತು ಇತರೇ ಉದ್ಘೋಷಣಾ ಪತ್ರವನ್ನು ಬಸ್ ನಿಲ್ದಾಣದಲ್ಲಿ ಅಂಟಿಸಿ ಪಂಚರ ಸಮಕ್ಷಮ ಟಂ ಟಂ ಮೂಲಕ ಇಸ್ತಿಯಾರ ಪತ್ರವನ್ನು ಸಾರ್ವಜನಿಕ ಬಸ್ ನಿಲ್ದಾಣದಲ್ಲಿ ಅಂಟಿಸಿ ಸ್ಥಳದಲ್ಲಿ ಒಂದು ಪಂಚನಾಮೆ ತಯಾರಿಸಿ ಪಂಚರ ಸಹಿ ಪಡೆದಿರುತ್ತೇನೆ. ಮತ್ತು ಈ ಬಗ್ಗೆ ಠಾಣಾಧಿಕಾರಿಗಳಿಗೆ ವರದಿ ತಿಳಿಸಿ ಉದ್ಘೋಷಣಾ ಪತ್ರದ ಪ್ರತಿಯೊಂದಿಗೆ ವರದಿಯನ್ನು ನ್ಯಾಯಾಲಯಕ್ಕೆ ಹಿಂತಿರುಗಿಸಿದ್ದೇನೆ. ಹಾರಾಡಿ ಗ್ರಾಮದ ಬಸ್ ನಿಲ್ದಾಣದಲ್ಲಿ ತಯಾರಿಸಿದ ಪಂಚನಾಮೆ ನೋಡುತ್ತಿದ್ದು ಅದನ್ನು ನ್ಯಾಯಾಲಯ ನಿಶಾನೆ

-1 ಎಂದೂ ಅದರಲ್ಲಿದ್ದ ನನ್ನ ಸಹಿಯನ್ನು ನಿಶಾನೆ-1ಎ ಎಂದು ಗುರುಸಲಾಗಿದೆ. ಮತ್ತು ಇಸ್ತಿಯಾರ ಪತ್ರದ ನಕಲನ್ನು ನ್ಯಾಯಾಲಯ ನಿಶಾನೆ-2 ಎಂದೂ ಗುರುತಿಸಿದೆ. ಮತ್ತು ಠಾಣಾಧಿಕಾರಿಗಳಿಗೆ ನಾನು ನೀಡಿದ ವರದಿಯನ್ನು ನೋಡುತ್ತಿದ್ದು ಅದನ್ನು ನ್ಯಾಯಾಲಯ ನಿಶಾನೆ 3 ಎಂದು ನನ್ನ ಸಹಿಯನ್ನು ನಿಶಾನೆ 3ಎ ಎಂದು ಗುರುಸಲಾಗಿದೆ. ವತ್ತು ಸ್ಥಳದಲ್ಲಿ ವಿಚಾರಿಸಲಾಗಿ ಸದ್ರಿ ಆರೋಪಿಯ ಹೆಸರಿನಲ್ಲಿ ಚರ ಮತ್ತು ಚಿರಾಸ್ತಿಗಳು ಇರದ ಬಗ್ಗೆ ವಿಚಾರಣೆ ಮಾಡಲಾಗಿ ತಹಶೀಲ್ದಾರರು ಹೊಸದುರ್ಗ ಇವರು ನೀಡಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ತಹಶೀಲ್ದಾರರು ಹೊಸದುರ್ಗ ಇವರು ನೀಡಿದ ವರದಿಯನ್ನು ನ್ಯಾಯಾಲಯ ನಿಶಾನೆ 4 ಎಂದು ಠಾಣೆಯಿಂದ ಮಾಡಿದ ಪತ್ರ ವ್ಯವಹಾರದ ಎರಡು ನಕಲುಗಳನ್ನು ನ್ಯಾಯಾಲಯ ನಿಶಾನೆ 5 ಮತ್ತು ನಿಶಾನೆ 6 ಎಂದು ಗುರುತಿಸಲಾಗಿದೆ. ಆರೋಪಿ ಫಾರುಕ್ ತಲೆಮರೆಸಿಕೊಂಡಿದ್ದು ಸದ್ಯದಲ್ಲಿ ಸಿಗುವ ಸಾಧ್ಯತೆಗಳು ಇಲ್ಲಾ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾ.
ಕುಂದಾಪುರ